**ಇಂದು ದಿನಾಂಕಃ 27-02-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 4ನೇ ಪ್ರತಿವಾದಿ ಪರವಾಗಿ ಶ್ರೀ SGJ ವಕೀಲರಿಂದಃ-**

ನನ್ನ ಅಜ್ಜದ ಹೆಸರು ಮೊಹ್ಮದ ಹುಸೇನ ಮಾಸಲ್ದಾರ. ನನ್ನ ಅಜ್ಜನಿಗೆ 1 ಸ.ನಂ. ನಲ್ಲಿ ಜಮೀನು ಇತ್ತು. ನನ್ನ ಅಜ್ಜನ ಹೆಸರಿನಲ್ಲಿರುವ ಖಾಸರ ಪಹಣಿಯನ್ನು ನೋಡಿದ್ದೇನೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಖಾಸರ ಪಹಣಿ ಪ್ರಕಾರ ಸ.ನಂ. 269 ಮತ್ತು 270 ರಲ್ಲಿ ನನ್ನ ಅಜ್ಜನಿಗೆ ಜಮೀನು ಇತ್ತು ಎಂದರೆ ಇರಬಹುದು. ಖಾಸರ ಪಹಣಿಯಲ್ಲಿ ದಾವೆ ಸಲ್ಲಿಸುವ ಸಮಯಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಸಲ್ಲಿಸಿರಬಹುದು ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಸಮಯಕ್ಕೆ ನಾನು ಯಾವುದೇ ಖಾಸರ ಪಹಣಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮೊಹ್ಮದ ಹುಸೇನರವರಿಗೆ ಇಬ್ಬರು ಮಕ್ಕಳು ಇದ್ದು ಅವರಲ್ಲಿ ಮೇಹಬೂಬ ಬೀ ನನ್ನ ತಾಯಿ ಮತ್ತು ಮಶಾಕ್ ಬೀ ನನ್ನ ಚಿಕ್ಕಮ್ಮ ಇರುತ್ತಾರೆ. ಮೆಹಬೂಬ ಬೀ ರವರಿಗೆ ಕಾಳಗಿ ಗ್ರಾಮದ ಖಾದಿರ ಬೇಗ್ ರವರೊಂದಿಗೆ ಮದುವೆ ಮಾಡಿರುತ್ತಾರೆ. ನನ್ನ ತಾಯಿಯ ಗ್ರಾಮ ರಟಕಲ ಎಂದರೆ ಸರಿ. ಮದುವೆಯಾದ ನಂತರ ನನ್ನ ತಾಯಿ ಕಾಳಗಿಯಲ್ಲಿ ವಾಸಿಸಲು ಪ್ರಾರಂಭಿಸಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಮಹ್ಮದ ಹುಸೇನರವರು ಮೆಹಬೂಬ ಬೀ ರವರಿಗೆ ಸ.ನಂ. 269 ರಲ್ಲಿ 17 ಎಕರೆ 7 ಗುಂಟೆ ಜಮೀನು ನೀಡಿರುತ್ತಾರೆ ಮತ್ತು ಸ.ನಂ. 270 ರಲ್ಲಿ 17 ಗುಂಟೆ ಜಮೀನನ್ನು ಮಶಾಕ್ ಬೀ ರವರಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 269 ರಲ್ಲಿರುವ ಜಮೀನು ಯಾರು ಯಾರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಾಯಿ ಯಾರಿಗೂ ಗೊತ್ತಿಲ್ಲದೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸ.ನಂ. 270 ರ ಜಮೀನು ಮಶಾಕ್ ಬೀರವರ ಹೆಸರಿನಲ್ಲಿ ವರ್ಗಾವಣೆಯಾಗಿತ್ತು ಎಂದರೆ ಸರಿ. 1963-64 ರಲ್ಲಿ ಸ.ನಂ. 270 ರ ಜಮೀನು ಮಶಾಕ್ ಬೀರವರ ಹೆಸರಿನಲ್ಲಿ ವರ್ಗಾವಣೆಯಾಗಿದ್ದು ಮತ್ತು 30 ರಿಂದ 40 ವರ್ಷಗಳ ಕಾಲ ಅವರ ಹೆಸರಿನಲ್ಲಿ ಇದ್ದು ನಂತರ 4ನೇ ಪ್ರತಿವಾದಿಯ ಹೆಸರಿನಲ್ಲಿ ವರ್ಗಾವಣೆಯಾಗಿದೆ ಎಂದರೆ ಸರಿ. 1963-64 ರಲ್ಲಿ ಮಶಾಕ್ ಬೀರವರ ಹೆಸರಿಗೆ ವರ್ಗಾವಣೆಯಾದ ನಂತರ ಅಥವಾ 4ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾದ ನಾವು ಅದನ್ನು ರದ್ದು ಮಾಡುವಂತೆ ಯಾವುದೇ ಅರ್ಜಿ ಸಲ್ಲಿಸಿಲ್ಲ.

30 ರಿಂದ 40 ವರ್ಷಗಳಿಂದ ದಾವಾ ಜಮೀನಿನ ತೆರಿಗೆ ಮಶಾಕ್ ಬೀ ಮತ್ತು 4ನೇ ಪ್ರತಿವಾದಿ ಭರಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. ಮಶಾಕ್ ಬೀ ಅಥವಾ 4ನೇ ಪ್ರತಿವಾದಿಯ ಹೆಸರಿನಲ್ಲಿ ವರ್ಗಾವಣೆಯಾಗಿದ್ದನ್ನು ನಾನು ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ದಾವಾ ಜಮೀನಿಗೆ ನಾನು ಅಥವಾ 5 ರಿಂದ 8 ನೇ ಪ್ರತಿವಾದಿಯರು ಸಂಬಂಧವಿಲ್ಲ ಎಂದರೆ ಸಾಕ್ಷಿ ನಾವು ನ್ಯಾಯಾಲಯಕ್ಕೆ ಹಾಜರು ಆದ ಕಾರಣ ಸಂಬಂಧವಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಜಮೀನಿಗೆ 1 ರಿಂದ 4ನೇ ಪ್ರತಿವಾದಿಯರು ಮಾಲಿಕತ್ವದಿಂದಾಗಲಿ ಮತ್ತು ಕಬ್ಜಯಿಂದಾಗಲಿ ಸಂಬಂಧವಿದ್ದಾರೆ ಎಂದರೆ ಸಾಕ್ಷಿ ಈಗ ಅವರೇ ಸಂಬಂಧವಿದ್ದಾರೆ

ಎಂದು ನುಡಿಯುತ್ತಾರೆ.

ವಾದ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ. ವಾದ ಪತ್ರದಲ್ಲಿರುವ ಸಂಗತಿಗಳಲ್ಲೆ ಸರಿಯಾರಿ ಇರುತ್ತವೆ. ವಾದಪತ್ರದಲ್ಲಿ ಸ.ನಂ. 269 ರ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸಾಕ್ಷಿ ನನಗೆ ಯಾರು ಸ.ನಂ. 269 ರ ಬಗ್ಗೆ ಹೇಳಿಲ್ಲ ಆದ್ದರಿಂದ ಬರೆಸಿಲ್ಲ ಎಂದು ನುಡಿಯುತ್ತಾರೆ. 4ನೇ ಪ್ರತಿವಾದಿಯ ಪ್ರತಿವಾದ ಪತ್ರವನ್ನು ಓದಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಅವರು ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. 4ನೇ ಪ್ರತಿವಾದಿರವರು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಮತ್ತು ನಾನು ಅದನ್ನು ಓದಿಲ್ಲ ಎಂದರೆ ಸಾಕ್ಷಿ ನನಗೆ ನೋಟಿಸನ್ನು ನೀಡಿಲ್ಲ ಎಂದು ನುಡಿಯುತ್ತಾರೆ. ನಾನೇ ದಾವೆ ಸಲ್ಲಿಸಿದ ಕಾರಣ 4ನೇ ಪ್ರತಿವಾದಿ ನನಗೆ ನೋಟಿಸ ನೀಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಕುಟುಂಬದ ಬಗ್ಗೆ, ಜಮೀನಿನ ಬಗ್ಗೆ ಅಥವಾ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಸಹ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿಯ ಹೆಸರಿನಲ್ಲಿರುವ ಜಮೀನು ಮಾರಾಟ ಮಾಡಿದ್ದರು ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 269 ರ 17 ಎಕರೆ 7 ಗುಂಟೆ ಜಮೀನನ್ನು ನನ್ನ ತಾಯಿ ಆಗಯ್ಯ ಗುತ್ತೇದಾರರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಶಾಕ್ ಬೀರವರು ನನ್ನ ತಾಯಿಗೆ ಗೊತ್ತಿಲ್ಲದೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಮಶಾಕ್ ಬೀರವರು ಸದರಿ ಜಮೀನನ್ನು ಆಗಯ್ಯ ಗುತ್ತೇದಾರರವರಿಗೆ ಮಾರಾಟ ಮಾಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ಸುಳ್ಳು ಶಪಥ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು 1 ರಿಂದ 3ನೇ ಪ್ರತಿವಾದಿಯರ ಪರವಾಗಿ ವಕೀಲರು ಗೈರು ಹಾಜರಿರುವ ಕಾರಣ ವಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**